ಹಂಪಿ ಟೈಮ್ಸ್
HAMPI TIMES

ಮಂಗಳವಾರ / Tuesday 08.10.2024

ವಿಜಯನಗರ



ಕವಿ ಮನಸು

## ದಾಖಲಾತಿ ಪರಿಶೀಲನೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಸರ್ವೇಕ್ಷಣಾ ಘಟಕದ ಎನ್.ಪಿ.-ಎನ್.ಸಿ.ಡಿ. ಮತ್ತು ಎನ್.ಪಿ.ಪಿ.ಸಿ. ಕಾರ್ಯಕ್ರಮಗಳಡಿಯಲ್ಲಿ ಶುಶ್ರೂಷ ಕಾಧಿಕಾರಿಗಳ ಹುದ್ದೆಗೆ ಎರಡನೇ ಸುತ್ತಿನ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಅವರು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ದಾಖಲಾತಿಗಳ ಮೂಲ ದಾಖಲಾತಿ ಪರಿಶೀಲನೆಯನ್ನು ಅಕ್ಟೋಬರ್ 10ರವರೆಗೆ ಮಾಡಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತಿಳಿಸಿದ್ದಾರೆ.

## ಸ್ಥಿರಾಸ್ತಿಗಳ ನೋಂದಣಿಗೆ ಇ-ಆಸ್ತಿ ಖಾತಾ ಕಡ್ಡಾಯ

**ಹಂಪಿ ಟೈಮ್ಸ್ ಕೊಪ್ಪಳ**

ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯ ಸ್ಥಿರಾಸ್ತಿಗಳ ನೋಂದಣಿಗೆ ಇ-ಆಸ್ತಿ ತಂತ್ರಾಂಶವನ್ನು ಕಾವೇರಿ-2.0 ತಂತ್ರಾಂಶದೊಂದಿಗೆ ರಾಜ್ಯದ 8 ಜಿಲ್ಲೆಗಳಾದ ಬಳ್ಳಾರಿ, ಬೀದರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಾವಣಗೇರಿ, ಹಾಸನ, ಹಾವೇರಿ ಸೇರಿದಂತೆ ಕೊಪ್ಪಳ ಜಿಲ್ಲೆಗೂ ಸಹ ವಿಸ್ತರಿಸಿ ಸೆಪ್ಟಂಬರ್ 23 ರಿಂದ ಸಂಯೋಜಿಸಿ ಇ-ಆಸ್ತಿ ತಂತ್ರಾಂಶದಿಂದ ಮಾತ್ರ ಮಾಹಿತಿ ಪಡೆದು ನೋಂದಾಯಿಸಲು ಸರ್ಕಾರವು ಆದೇಶಿಸಿರುತ್ತದೆ.

ಇ-ಆಸ್ತಿ ಖಾತಾ ಇದ್ದಲ್ಲಿ ಮಾತ್ರ ಕಾವೇರಿ-2.0 ತಂತ್ರಾಂಶದೊಂದಿಗೆ ಸಾರ್ವಜನಿಕರು ಯಾವುದೇ ಸ್ವತ್ತು ನೋಂದಣಿಗಾಗಿ ಇ-ಆಸ್ತಿ ಖಾತಾ ಕಡ್ಡಾಯವಾಗಿರುವುದರಿಂದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ಥಿರಾಸ್ತಿಗಳ ನೋಂದಣಿಯನ್ನು ಇ-ಆಸ್ತಿ ತಂತ್ರಾಂಶದಿಂದ ಮಾಹಿತಿ ಪಡೆಯದೇ ಬೇರೆ ಯಾವುದೇ ವಿಧಾನದಲ್ಲಿ ಸ್ಥಿರಾಸ್ತಿಗಳ ನೋಂದಣಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಜನರು ಸಹಕರಿಸಿ ಸದುಪಯೋಗಪಡಿಸಿಕೊಳ್ಳಿ.

## ವಿವಿಧ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಬೆಂಗಳೂರಿನ ರುಡ್‌ಸೆಟ್ ಸಂಸ್ಥೆಯಲ್ಲಿ ಅಕ್ಟೋಬರ್ 18 ರಿಂದ ನವೆಂಬರ್ 30 ರವರೆಗೆ 13-ದಿನಗಳವರೆಗೂ ಸಿ.ಸಿ.ಟಿ.ವಿ.ಅಳವಡಿಕೆ, ಸ್ಮೋಕ್ ಡಿಟೆಕ್ಟರ್ ಸರ್ವಿಸಿಂಗ್ ತರಬೇತಿ ಇರುತ್ತದೆ. ನವೆಂಬರ್ 06 ರಿಂದ ಡಿಸೆಂಬರ್ 05 ವರೆಗೆ 30 ದಿನಗಳ ಕಾಲ ಮೋಟಾರ್ ರಿವೈಂಡಿಂಗ್ ಮತ್ತು ಸರ್ವಿಸಿಂಗ್ ತರಬೇತಿ ಇರುತ್ತದೆ. ಅರ್ಜಿ ಸಲ್ಲಿಸ ಬಯಸುವವರು ಗ್ರಾಮೀಣ ಅಭ್ಯರ್ಥಿಗಳಾಗಿದ್ದು 18 ರಿಂದ 45 ವಯೋಮಾನದವರಾಗಿರಬೇಕು. ಕಡ್ಡಾಯವಾಗಿ ಬಿ.ಪಿ.ಎಲ್/ಪಿ.ಹೆಚ್.ಹೆಚ್/ಅಂತ್ಯೋದಯ/ಎಂ.ಜಿ.-ನರೇಗಾ ಯೋಜನೆಯಡಿಯಲ್ಲಿ ಜಾಬ್ ಕಾರ್ಡನ್ನು ಹೊಂದಿರುವ ಕುಟುಂಬದ ಸದಸ್ಯರಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ ರುಡ್ ಸೆಟ್ ಸಂಸ್ಥೆಯ ನಿರ್ದೇಶಕರು ಅರಿಶಿನ ಕುಂಟೆ, ನೆಲಮಂಗಲ ತಾ॥, ಬೆಂಗಳೂರು ಗ್ರಾಮಾಂತರ ಮೊಬೈಲ್ ಸಂಖ್ಯೆ: 8105526792, 9241482541, 911388032 ಗೆ ಸಂಪರ್ಕಿಸಿ.

# ಕ್ರೀಡಾ ಸ್ಫೂರ್ತಿ ದೇವೇಂದ್ರ ಝಜಾರಿಯಾ

ಕೆಲ ಕ್ರೀಡಾ ಸಾಧಕರ ಸಾಧನೆಯನ್ನು ಹೆಕ್ಕಿ ತೆಗೆಯುವಾಗ ನಿಜಕ್ಕೂ ಆಶ್ಚರ್ಯವಾಗುತ್ತದೆ ಕಾರಣ, ಕೊಟ್ಟು ಸಲಹುವ ಭಗವಂತ ಕಿತ್ತು ಕೆಲವೊಮ್ಮೆ ಮುಂದೆ ನಿಂತು ಗುರಿ ತೋರಿಸಿ ದಡ ಸೇರಿಸುತ್ತಾನೆ ಎನ್ನುವುದಕ್ಕೆ ಈ ಕ್ರೀಡಾಪಟು ನಿಜವಾದ ಉದಾರಣೆ ಎಂದರೆ ತಪ್ಪಾಗಲಾರದು.

ಇವರು ತಮ್ಮ ಎಂಟನೇ ವಯಸ್ಸಿನಲ್ಲಿ ಮರವನ್ನು ಹತ್ತುತ್ತಾರೆ ಮರದ ತುದಿಯಲ್ಲಿರುವ ಹೈ ವೋಲ್ಟೇಜ್ ವಿದ್ಯುತ್ ತಂತಿಯನ್ನು ತಮಗೆ ಅರಿವಿಲ್ಲದೆ ಸ್ಪರ್ಶಿಸಿದ ಪರಿಣಾಮ ತಮ್ಮ ಎಡ ಮುಂಗೈ ಕಳೆದುಕೊಳ್ಳುತ್ತಾರೆ ವೈದ್ಯಕೀಯ ಚಿಕಿತ್ಸೆ ಫಲಕಾರಿಯಾಗದ ಕಾರಣದಿಂದಾಗಿ.

ಯಾರಿಗಾದರೂ ಕ್ರೀಡೆಯ ಮೇಲೆ ಉತ್ಸಾಹ ಇರದೆ ಇರಲು ಸಾಧ್ಯವಿಲ್ಲ ಅದೇ ರೀತಿ ಇವರು ಕೂಡ ತಮ್ಮ ಶಾಲಾ ದಿನಗಳಲ್ಲಿ ಕ್ರೀಡೆಯಲ್ಲಿ ಸ್ಪರ್ಧಿಸುತ್ತಾರೆ ಇವರ ಅದೃಷ್ಟ ಇವರು ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಕ್ರೀಡಾ ತರಬೇತುದಾರರಾದ ಆರ್.ಡಿ.ಸಿಂಗ್ ರವರ ಕಣ್ಣಿಗೆ ಬೀಳುತ್ತಾರೆ ಅಲ್ಲಿಂದ ಇವರಿಗೆ ತರಬೇತಿ ದೊರೆಯಲು ಆರಂಭಿಸಿ ಮುಂದೆ 2004 ರ ಪ್ಯಾರಾ ಒಲಂಪಿಕ್ ನಲ್ಲಿ ಚಿನ್ನದ ಪದಕವನ್ನು ಪಡೆದು ಆ ಪದಕವನ್ನು ಇವರ ತರಬೇತುದಾರರಿಗೆ ಅರ್ಪಿಸುತ್ತಾರೆ ಇದಲ್ಲವೇ ನಿಜವಾದ ಗುರು ಕಾಣಿಕೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381
Scan For Digital Colourful
HAMPI TIMES E-paper

ಇವರು ಜೂನ್ 1981ರಲ್ಲಿ ರಾಜಸ್ಥಾನದ ಜೈಪುರದಲ್ಲಿ ಜನಿಸಿದರು ತಂದೆ-ರಾಮ್ ಸಿಂಗ್,ತಾಯಿ-ಜಿವಾನಿ ದೇವಿ ಇವರು ನಿಜಕ್ಕೂ ಕ್ರೀಡಾ ಸ್ಫೂರ್ತಿ ಮೆರೆಯುವ ಭಾರತೀಯ ಜಾವಲಿನ್ ಎಸೆತಗಾರ.




ಭಾರತೀಯರು ಹೆಮ್ಮೆ ಪಡುವಂತಹ ಸಾಧನೆ ಪ್ಯಾರಾ ಒಲಂಪಿಕ್ಸ್ ನಲ್ಲಿ ಎರಡು ಚಿನ್ನದ ಪದಕವನ್ನು ಪಡೆಯುವುದರ ಮೂಲಕ ನಿರ್ಮಿಸಿದ್ದಾರೆ.

ಅಥೆನ್ಸ್ ನಲ್ಲಿ ನಡೆದ 2004ರ ಬೇಸಿಗೆ ಪ್ಯಾರಾ ಒಲಂಪಿಕ್ಸ್ ನಲ್ಲಿ ಮೊದಲ ಚಿನ್ನದ ಪದಕವನ್ನು ಭಾರತಕ್ಕಾಗಿ ಗೆದ್ದು ಕೊಟ್ಟರು.

ರಿಯೊ ಡಿ ಜನೈರೊದಲ್ಲಿ ನಡೆದ 2016 ರ ಬೇಸಿಗೆ ಪ್ಯಾರಾ ಒಲಂಪಿಕ್ನಲ್ಲಿ ಎರಡನೇ ಚಿನ್ನದ ಪದಕವನ್ನು ಗಳಿಸಿಕೊಟ್ಟರು ಜೊತೆಗೆ ಅವರ ಹಿಂದಿನ ಜಾವೆಲಿನ್ ಎಸೆತದ ದಾಖಲೆಯನ್ನು ಉತ್ತಮಗೊಳಿಸುವುದರೊಂದಿಗೆ.

ಟೋಕಿಯೊದಲ್ಲಿ 2020 ರ ಬೇಸಿಗೆ ಪ್ಯಾರಾ ಒಲಂಪಿಕ್ನಲ್ಲಿ ತಮ್ಮ ಮೂರನೇ ಪದಕವನ್ನು ಗೆಲ್ಲುವ ಮೂಲಕ ಭಾರತದ ಸ್ಪೂರ್ತಿದಾಯಕ ಪ್ಯಾರಾ ಒಲಿಂಪಿಕ್ ಕ್ರೀಡಾಪಟುವಾಗಿದ್ದಾರೆ ಇವರ ಸಾಧನೆಯನ್ನು ಪರಿಗಣಿಸಿ 2024 ರಲ್ಲಿ ಭಾರತದ ಪ್ಯಾರಾಲಿಂಪಿಕ್ ಸಮಿತಿಯ ಅಧ್ಯಕ್ಷರಾಗಿ ನೇಮಿಸಿ ಗೌರವಿಸಿದೆ.

ಇತರ ಕ್ರೀಡಾ ಸಾಧನೆಗಳನ್ನು ನೋಡುವುದಾದರೆ ಇವರು ದಕ್ಷಿಣ ಕೊರಿಯಾ(2002)8ನೇ ಪೆಸಿಫಿಕ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ.

ಫ್ರಾನ್ಸ್(2013)ಲಿಯಾನ್ ಐಪಿಸಿ ಅಥ್ಲೆಟಿಕ್ಸ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಎಫ್ 46 ವಿಭಾಗದಲ್ಲಿ ಚಿನ್ನದ ಪದಕ.

ದಕ್ಷಿಣ ಕೊರಿಯಾ(2014) ಇಂಚಿಯಾನ್ ಏಷ್ಯನ್ ಪ್ಯಾರಾ ಗೇಮ್ಸ್ ಬೆಳ್ಳಿ ಪದಕ.

ದೋಹಾ(2015)ಐಪಿಸಿ ಅಥ್ಲೆಟಿಕ್ಸ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ.




ದುಬೈ(2016)ಐಪಿಸಿ ಅಥ್ಲೆಟಿಕ್ಸ್ ಏಷ್ಯಾದ ಓಷಿಯಾನಿಯಾ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ.

ಇವರ ಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ 2022 ಪದ್ಮಭೂಷಣ,2012 ಪದ್ಮಶ್ರೀ,2017 ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ,2014 ಎಫ್ ಐ ಸಿ ಸಿ ಐ ಪ್ಯಾರಾ ಕ್ರೀಡಾಪಟು ಪ್ರಶಸ್ತಿ ಹಾಗೂ 2004 ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ.

ಮೊದಲು ಭಾರತೀಯ ರೈಲ್ವೆ ಉದ್ಯೋಗಿಯಾಗಿದ್ದ ಇವರು ಅದನ್ನು ತೊರೆದು ರಾಜಸ್ಥಾನ ಅರಣ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರ ಪತ್ನಿಯು ಶ್ರೀಮತಿ ಮಂಜು ರವರು ಸಹ ರಾಷ್ಟ್ರೀಯ ಶ್ರೇಯಾಂಕದ ಕಬಡ್ಡಿ ಆಟಗಾರ್ತಿ ಇವರಿಗೆ ಜಿಯಾ ಮತ್ತು ಕಾವ್ಯನ್ ಎಂಬ ಇಬ್ಬರು ಮಕ್ಕಳಿದ್ದಾರೆ.

ಸಾಧನೆಗೆ ಯಾವುದೇ ಅಂಗವೈಕಲ್ಯ ಅಡ್ಡಿಯಾಗದು ಸಾಧಿಸಬೇಕೆಂಬ ಛಲ ಇದ್ದರೆ ಎಲ್ಲವೂ ಸಾಧ್ಯ.

42 ವರ್ಷ ನಿಮ್ಮ ದೈಹಿಕ ವಯಸ್ಸು ದಾಟಿದರೂ ನೀವು ಕಳೆದುಕೊಳ್ಳದ ಕ್ರೀಡಾ ಉತ್ಸಾಹ ಯುವ ಕ್ರೀಡಾಪಟುಗಳಿಗೆ ಮಾದರಿ ಹಾಗೂ ನೀವು ನಿಜಕ್ಕೂ ಕ್ರೀಡಾ ಸ್ಫೂರ್ತಿ.

ನಿಮ್ಮ ಮುಂದಿನ ಎಲ್ಲಾ ಕ್ರೀಡಾ ಕನಸುಗಳು ಈಡೇರಲಿ ಎಂದು ನಾವು ದೇವರಲ್ಲಿ ಪ್ರಾರ್ಥಿಸುತ್ತೇವೆ.

## ಎಸ್‌ಎಸ್‌ಎಲ್‌ಸಿ ಪ್ರಶ್ನೋತ್ತರಗಳ ಸರಣಿಗೆ ವಿದ್ಯಾರ್ಥಿಗಳ ಅನಿಸಿಕೆಗಳು

### ಕಲಿಕೆಗೆ ಸಹಕಾರ



**'ಹಂಪಿಟೈಮ್ಸ್'** ನಲ್ಲಿ ಬರುವ ಪ್ರಶ್ನೋತ್ತರಗಳು ನಮ್ಮ ಶ್ರಮವನ್ನು ಕಡಿಮೆ ಮಾಡಿದವು. ಪ್ರತಿ ಪಾಠದಿಂದ ನೀಡುವ ಮುಖ್ಯವಾದ ಪ್ರಶ್ನೋತ್ತರಗಳು ನಮಗೆ ಹೆಚ್ಚು ಉಪಯುಕ್ತವಾದವು. ಹಂಪಿಟೈಮ್ಸ್ ಪತ್ರಿಕೆ ನಮ್ಮ ಕಲಿಕೆಗೆ ಸಹಕಾರ ನೀಡುತ್ತಿರುವುದಕ್ಕೆ ಧನ್ಯವಾದಗಳು. ಇದನ್ನು ನಿರಂತರವಾಗಿ ಪ್ರಕಟಿಸುತ್ತಿರುವ ಪತ್ರಿಕಾ ಬಳಗಕ್ಕೆ ಹಾಗೂ ಬರೆಯುತ್ತಿರುವ ಶಿಕ್ಷಕರಿಗೆ ಅನಂತ ನಮಸ್ಕಾರಗಳು.

**– ಎ. ಪ್ರಜ್ವಲ್. 10ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

**ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು ನಿಮ್ಮ ಅಭಿಪ್ರಾಯಗಳನ್ನು ಭಾವಚಿತ್ರದೊಂದಿಗೆ ಕಳುಹಿಸಬಹುದು.**
M: 9448633038 - Email: hampitimes@gmail.com

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

www.hampitimes.com - Hampi Times Margadarshi

### ವಿಷಯ : ಕನ್ನಡ (ಪ್ರ.ಭಾ) ಗಾದೆಗಳು (ವ್ಯಾಕರಣಾಂಶ)

**ಗಾದೆಯ ಮಹತ್ವ:–** ವೇದಗಳಿಗೆ ಸಮವಾದ ಗಾದೆಗಳನ್ನ ಜನಪದದ 'ಉಪನಿಷತ್'ಗಳೆಂದು ಕರೆಯುತ್ತಾರೆ. ಗಾದೆಗಳು ಚಿಕ್ಕ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನು ನೀಡುತ್ತವೆ. ಗಾದೆಗಳು ಗ್ರಾಮೀಣ ಜನರ ಜೀವನಾಡಿಗಳಾಗಿವೆ. ಹಿರಿಯರ ಅನುಭವ ಸಾರಗಳಾದ ಗಾದೆಗಳು ನಮಗೆ ಉತ್ತಮ ಬದುಕನ್ನು ರೂಪಿಸಲು ಸಹಾಯಕಾರಿಯಾಗಿವೆ. ಗಾದೆಗಳು ಸತ್ಯವನ್ನು ಪ್ರತಿಬಿಂಬಿಸುತ್ತವೆ ಎಂಬ ಮಾತು ಸುಳ್ಳಲ್ಲ. ಪರೀಕ್ಷಾ ದೃಷ್ಟಿಯಿಂದ ಗಾದೆಗಳು ಮಹತ್ವದ ಸ್ಥಾನ ಪಡೆದಿವೆ. ಅವುಗಳ ಅಂಕ ವಿಂಗಡಣೆ ಹೀಗಿರುತ್ತದೆ.

**1) ಗಾದೆಮಾತುಗಳ ಮಹತ್ವ ಮತ್ತು ಉಪಯುಕ್ತತೆಯನ್ನು ತಿಳಿಸುವುದು.– 1 ಅಂಕ**

**2) ಗಾದೆಮಾತುಗಳಲ್ಲಿ ಅಡಗಿರುವ ಅರ್ಥವನ್ನು ವಿವರಿಸುವುದು.– 1 ಅಂಕ**

**3) ಗಾದೆಮಾತನ್ನು ಸಮರ್ಥಿಸುವ ನಿದರ್ಶನ (ಉದಾಹರಣೆ) ಕೊಡುವುದು. ಮತ್ತು ಭಾಷಾ ಶೈಲಿ– 1 ಅಂಕ**

ಹೀಗೆ ಒಟ್ಟು ಗಾದೆಮಾತು ವಿಸ್ತರಣೆಗೆ 3 ಅಂಕಗಳು ಮೀಸಲಾಗಿರುತ್ತವೆ. ಕೆಲವು ಮಹತ್ವದ ಗಾದೆಗಳನ್ನು ಈ ಕೆಳಗೆ ಅರ್ಥ ವಿವರಣೆಯೊಂದಿಗೆ ನೀಡಲಾಗಿದೆ.

#### ಆರೋಗ್ಯವೇ ಭಾಗ್ಯ

**ಗಾದೆಯ ಮಹತ್ವ:–** ಗಾದೆಗಳು ವೇದಗಳಿಗೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳನ್ನು ಜನಪದದ ಉಪನಿಷತ್ ಗಳೆಂದು ಕರೆಯುತ್ತಾರೆ. ಗಾದೆಗಳು ಚಿಕ್ಕ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನು ನೀಡುತ್ತವೆ. ಗಾದೆಗಳು ಗ್ರಾಮೀಣ ಜನರ ಜೀವನಾಡಿಗಳಾಗಿವೆ. 'ಆರೋಗ್ಯವೇ ಭಾಗ್ಯ' ಎಂಬ ಈ ಗಾದೆಯು ಕನ್ನಡದ ಪ್ರಸಿದ್ಧ ಗಾದೆಗಳಲ್ಲಿ ಒಂದಾಗಿದೆ.

**ಅರ್ಥ ವಿವರಣೆ:–** ನಮ್ಮ ಹಿರಿಯರು ನೂರು ವರ್ಷ ಬದುಕಲು ಬಯಸುತ್ತಿದ್ದರು. ಆರೋಗ್ಯವೇ ಮನುಷ್ಯನ ನಿಜವಾದ ಭಾಗ್ಯ. ಆರೋಗ್ಯ ಇಲ್ಲದವನು ತನ್ನ ಜೀವನದಲ್ಲಿ ಏನನ್ನು ಸಾಧಿಸಲಾರ. ಅದನ್ನು ನಾವು ಪ್ರಾಣದಷ್ಟೆ ಚೆನ್ನಾಗಿ ಕಾಪಾಡಿಕೊಳ್ಳಬೇಕು. ಆರೋಗ್ಯ ಭಾಗ್ಯ ಇದ್ದರೆ ಎಲ್ಲಾ ಭಾಗ್ಯಗಳು ಇದ್ದಂತೆ. ಶರೀರ ನಮಗೊಂದು ವರ.ಅದು ರೋಗ ರಹಿತವಾಗಿದ್ದರೆ ಬದುಕು ಆನಂದಮಯ ಎನಿಸುತ್ತದೆ. ಆರೋಗ್ಯದ ರಕ್ಷಣೆಯು ನಮ್ಮ ಕರ್ತವ್ಯವಾಗಿದೆ. ರೋಗ ಬರದಂತೆ ಎಚ್ಚರ ವಹಿಸುವುದು ಉಪಾಯ. ಅದಕ್ಕಾಗಿ ಆರೋಗ್ಯದ ನಿಯಮಗಳನ್ನು ಎಚ್ಚರದಿಂದ ಪಾಲಿಸಬೇಕು. ಆರೋಗ್ಯ ಕೆಟ್ಟಾಗ ವೈದ್ಯರ ಸಲಹೆ ಪಡೆಯುವುದು ಅತ್ಯವಶ್ಯಕ. ಆರೋಗ್ಯ ಕೆಡದಂತೆ ನೋಡಿಕೊಳ್ಳುವುದು ಆದಷ್ಟು ಒಳ್ಳೆಯದು ಎಂಬುದು ಈ ಗಾದೆಯ ಸಾರ.

#### ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?

**ಗಾದೆಯ ಮಹತ್ವ:–** ಗಾದೆಗಳು ವೇದಗಳಿಗೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳನ್ನು ಜನಪದದ ಉಪನಿಷತ್ ಗಳೆಂದು ಕರೆಯುತ್ತಾರೆ. ಗಾದೆಗಳು ಚಿಕ್ಕ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನು ನೀಡುತ್ತವೆ. ಗಾದೆಗಳು ಗ್ರಾಮೀಣ ಜನರ ಜೀವನಾಡಿಗಳಾಗಿವೆ. 'ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?' ಎಂಬ ಈ ಗಾದೆಯು ಕನ್ನಡದ ಪ್ರಸಿದ್ಧ ಗಾದೆಗಳಲ್ಲಿ ಒಂದಾಗಿದೆ.

**ಅರ್ಥ ವಿವರಣೆ:–** ಗತಿಸಿಹೋದ ಸಮಯ. ಕಾಲ ಎಂದಿಗೂ ಪುನಃ ಬರುವುದಿಲ್ಲ. ಉತ್ತಮ ಕೆಲಸ ಅಥವಾ ಕೆಟ್ಟ ಕೆಲಸವನ್ನು ಮಾಡಿದ್ದರೂ ನಾವು ಅದರ ಬಗ್ಗೆ ಚಿಂತಿಸದೇ ಸಮಯ ಪ್ರಜ್ಞೆಯಿಂದ ಮುಂದೆ ಉತ್ತಮ ಕಾರ್ಯಗಳನ್ನು ಮಾಡುವುದರ ಕುರಿತು ಧೈರ್ಯ ಮತ್ತು ಆತ್ಮವಿಶ್ವಾಸದಿಂದ ಸಾಗಬೇಕು. ಕಳೆದುಹೋದ ಸಮಯವನ್ನು ಚಿಂತಿಸುತ್ತಾ ಕುಳಿತರೆ ಯಾವುದೇ ಉಪಯೋಗವಾಗದು ಬದಲಾಗಿ ಆರೋಗ್ಯ ಸಮಸ್ಯೆಗಳು ಬರುತ್ತವೆ. ಮತ್ತು ಸಮಯವೂ ವ್ಯರ್ಥವಾಗುತ್ತದೆ. ಎಲ್ಲರ ಜೀವನ ಒಂದೇ ರೀತಿಯಲ್ಲಿ ಇರುವುದಿಲ್ಲ. ಜೀವನದಲ್ಲಿ ಉನ್ನತ ಗುರಿಯನ್ನು ಹೊಂದಿರಬೇಕು. ಗುರಿಯನ್ನು ಸಾಧಿಸಲು ಪರಿಶ್ರಮ ಪಡಬೇಕು. ಆಗ ಯಶಸ್ಸು ನಮ್ಮನ್ನು ಹುಡುಕಿಕೊಂಡು ಬರುತ್ತದೆ. ಹಾಗಾಗಿ ಮಿಂಚಿಹೋದ ಕಾಲವನ್ನು ಚಿಂತಿಸಬಾರದು. ಚಿಂತಿಸಿದರೆ ಯಾವುದೇ ಪ್ರಯೋಜನವಿಲ್ಲ.

#### ಹೆತ್ತ ತಾಯಿ; ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು.

**ಗಾದೆಯ ಮಹತ್ವ:–** ಗಾದೆಗಳು ವೇದಗಳಿಗೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳನ್ನು ಜನಪದದ ಉಪನಿಷತ್ ಗಳೆಂದು ಕರೆಯುತ್ತಾರೆ. ಗಾದೆಗಳು ಚಿಕ್ಕ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನು ನೀಡುತ್ತವೆ. ಗಾದೆಗಳು ಗ್ರಾಮೀಣಜನರಜೀವನಾಡಿಗಳಾಗಿವೆ.'ಹೆತ್ತತಾಯಿ;ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು' ಎಂಬ ಈ ಗಾದೆಯು ಕನ್ನಡದ ಪ್ರಸಿದ್ಧ ಗಾದೆಗಳಲ್ಲಿ ಒಂದಾಗಿದೆ.

**ಅರ್ಥ ವಿವರಣೆ:–** ಜೀವನದಲ್ಲಿ ನಮಗೆ ಹಲವಾರು ಸೌಲಭ್ಯಗಳು ದೊರೆತು ನಾವು ಅತ್ಯುನ್ನತ ದರ್ಜೆಗೆ ಏರಲು ಸಾದ್ಯವಾಗಬಹುದು. ಅದರಿಂದ ನಮಗೆ ಹಲವಾರು ವಿಧದ ಸುಖ ಹುಡುಕಿಕೊಂಡು ಬರಬಹುದು. ಆದರೆ ಹೆತ್ತತಾಯಿ ಮಡಿಲಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಯಾವುದರಿಂದಲೂ ಸಿಗುವುದಿಲ್ಲ. ಅದೇ ರೀತಿ ನಾವು ಜನ್ಮ ಪಡೆದ ನಾಡು ನಮಗೆ ಇಂದ್ರನ ನಂದನವನಕ್ಕಿಂತಲೂ ಮಿಗಿಲಾದುದು. ಅದಕ್ಕೆ ಕಾರಣ ನಮ್ಮ ಮನಸ್ಸಿನಲ್ಲಿ ಹುದುಗಿರುವ ಮಾತೃಭೂಮಿ ಕುರಿತಾದ ಗೌರವದ ಭಾವನೆಗಳು ಸ್ವರ್ಗವನ್ನೂ ಮೀರಿದೆ ಎಂಬುದು ಈ ಗಾದೆ ಮಾತಿನ ವಿಶೇಷತೆಯಾಗಿದೆ. ಜನ್ಮ ನೀಡಿದ ತಾಯಿ, ಮತ್ತು ನಮ್ಮನ್ನು ಹೊತ್ತು ಬೆಳೆಸಿದ ಈ ಭೂಮಿ ಸ್ವರ್ಗಕ್ಕಿಂತ ಶ್ರೇಷ್ಟವಾದುದು ಎಂಬ ಮೌಲ್ಯ ಈ ಗಾದೆಯಲ್ಲಿ ಅಡಕವಾಗಿದೆ.

**ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು.ಕೆ. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ(ತಾ) ವಿಜಯನಗರ(ಜಿ)**

ಸಹಕಾರ :– ಸಾಯಿಮಣಿ ಪ್ರಕಾಶನ, ಹೊಸಪೇಟೆ

# ಸಿಕಂದರಾಬಾದ್–ವಾಸ್ಕೋ–ಡ–ಗಾಮಾ (ಗೋವಾ) ಹೊಸಪೇಟೆ ಮಾರ್ಗವಾಗಿ ನೂತನ ರೈಲು ಸಂಚಾರ

### ವಾರಕ್ಕೆ ಎರಡು ಬಾರಿ ಸಂಚಾರ । ನೇರ ಸಂಪರ್ಕದಿಂದ ಪ್ರಯಾಣಿಕರ ಸಮಯ ಉಳಿತಾಯ

**ಹಂಪಿ ಟೈಮ್ಸ್ ಹೊಸಪೇಟೆ**

ಅಕ್ಟೋಬರ್ 9 ರಿಂದ ಹೊಸಪೇಟೆ ಮಾರ್ಗವಾಗಿ ಸಿಕಂದರಾಬಾದ್–ವಾಸ್ಕೋ–ಡ–ಗಾಮಾ (ಗೋವಾ)ನಡುವೆ ನೂತನ ರೈಲು ಸಂಚಾರ ಆರಂಭವಾಗಲಿದೆ. ರೈಲು ಸಂಚಾರದಿಂದ ಈ ಭಾಗದ ಪ್ರವಾಸೋದ್ಯಮ, ವಾಣಿಜ್ಯ ಚಟುವಟಿಕೆಗಳು ಗರಿಗೆದರಲಿದ್ದು, ಪ್ರಯಾಣಿಕರ ಸಂಚಾರ ಅವಧಿಯೂ ತಗ್ಗಲಿದೆ ಎಂದು ವಿಜಯನಗರ ರೈಲ್ವೇ ಅಭಿವೃದ್ಧಿ ಕ್ರಿಯಾ ಸಮಿತಿಯ ಅಧ್ಯಕ್ಷ ವೈ. ಯಮುನೇಶ್ ಹಾಗೂ ಕಾರ್ಯದರ್ಶಿ ಮಹೇಶ್ ಕುಡುತಿನಿ ತಿಳಿಸಿದ್ದಾರೆ.

ಈ ರೈಲು ವಾರಕ್ಕೆ ಎರಡು ಬಾರಿ ಸಂಚರಿಸಲಿದ್ದು, ಪ್ರತಿ ಬುಧವಾದ ಮತ್ತು ಶುಕ್ರವಾರ ರಂದು **ಗಾಡಿ ಸಂಖ್ಯೆ : 17039**, ಸಿಕಂದರಾಬಾದ್ ನಿಲ್ದಾಣದಿಂದ ಬೆಳಿಗ್ಗೆ 10.00 ಗಂಟೆಗೆ ನಿರ್ಗಮಿಸಿ ಕಾಚಿಗೂಡ, ಜೆಡ್ಚರ್ಲ, ಗದ್ವಾಲ್, ಕರ್ನೂಲ್ ಸಿಟಿ, ಧೋನ್, ಗುಂತಕಲ್, ಬಳ್ಳಾರಿ ಮಾರ್ಗವಾಗಿ ಹೊಸಪೇಟೆಗೆ ರಾತ್ರಿ 7.50ಕ್ಕೆ ಆಗಮಿಸುವುದು. ನಂತರ ಕೊಪ್ಪಳ, ಗದಗ, ಹುಬ್ಬಳ್ಳಿಯನ್ನು ರಾತ್ರಿ 10.50ಕ್ಕೆ ತಲುಪಿ ಧಾರವಾಡ, ಲೋಂಡಾ, ಮಡ್‌ಗಾವ್ ಮಾರ್ಗವಾಗಿ ವಾಸ್ಕೋ–ಡ–ಗಾಮಾವನ್ನು ಮರುದಿನ ಮುಂಜಾನೆ 5.45ಕ್ಕೆ ತಲುಪುವುದು.




ಅದೇ ರೀತಿ **ವಾಸ್ಕೋ–ಡ–ಗಾಮಾ ಗಾಡಿ ಸಂಖ್ಯೆ : 17040** ದಿಂದ ಪ್ರತಿ ಗುರುವಾರ ಮತ್ತು ಶನಿವಾರದಂದು ಬೆಳಿಗ್ಗೆ 9.00 ಗಂಟೆಗೆ ನಿರ್ಗಮಿಸಿ ಅದೇ ಮಾರ್ಗವಾಗಿ ಹೊಸಪೇಟೆಗೆ ಸಂಜೆ 5.00 ಗಂಟೆಗೆ ಆಗಮಿಸುವುದು, ನಂತರ ಬಳ್ಳಾರಿ, ಗುಂತಕಲ್ ಮಾರ್ಗವಾಗಿ ಮರುದಿನ ಮುಂಜಾನೆ 6.20ಕ್ಕೆ ಸಿಕಂದರಾಬಾದ್ ನಿಲ್ದಾಣವನ್ನು ತಲುಪುವುದು ಎಂದು ದಕ್ಷಿಣ ಮಧ್ಯ ರೈಲ್ವೇಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ಈವರೆಗೂ ಸಿಕಂರಾಬಾದ್ ಮತ್ತು ಗೋವಾ ನಡುವೆ ನೇರ ಹಾಗೂ ಪ್ರತ್ಯೇಕ ಪ್ರಯಾಣಿಕರ ರೈಲಿನ ವ್ಯವಸ್ಥೆ ಇರಲಿಲ್ಲ. ಈ ನಗರಗಳು ನಡುವೆ ಸಂಚರಿಸುವ ಪ್ರಯಾಣಿಕರು ಗುಂತಕಲ್ ನಿಲ್ದಾಣದಲ್ಲಿ ರೈಲು ಬದಲಿಸಬೇಕಿತ್ತು, ಈಗ ನೇರ ಸಂಪರ್ಕ ಕಲ್ಪಿಸಿರುವುದರಿಂದ ತೆಲಂಗಾಣ, ಆಂದ್ರ ಪ್ರದೇಶ, ಕರ್ನಾಟಕ, ಹಾಗೂ ಗೋವಾ ರಾಜ್ಯಗಳ ಐತಿಹಾಸಿಕ ನಗರಗಳ ನಡುವೆ ಸಂಪರ್ಕಕ್ಕೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

**With effect from:**

1. Train No. 17039 Secunderabad - Vasco-Da -Gama Express – **09.10.2024** (Wednesday & Friday)
2. Train No. 17040 Vasco-Da -Gama - Secunderabad Express – **10.10.2024** (Thursday & Saturday)

**Time Table of Secunderabad – Vasco-Da-Gama - Secunderabad**

| 17039 Secunderabad - Vasco–Da-Gama | | Stations | 17040 Vasco–Da-Gama - Secunderabad | |
|---|---|---|---|---|
| Arrival | Departure | | Arrival | Departure |
| -- | 10.05 | Secunderabad | 06.20 | -- |
| 10.18 | 10.20 | Kacheguda | 05.18 | 05.20 |
| 11.04 | 11.05 | Shadnagar | 04.19 | 04.20 |
| 11.37 | 11.38 | Jadcherla | 04.04 | 04.05 |
| 11.55 | 11.57 | Mahbubnagar | 03.38 | 03.40 |
| 12.49 | 12.50 | Gadwal | 00.49 | 00.50 |
| 13.50 | 13.52 | Kurnool City | 23.48 | 23.50 |
| 15.20 | 15.25 | Dhone | 22.50 | 22.55 |
| 16.50 | 17.05 | Guntakal | 20.40 | 20.55 |
| 18.35 | 18.40 | Bellary | 19.10 | 19.15 |
| 19.50 | 19.55 | Hospet | 17.00 | 17.05 |
| 20.28 | 20.30 | Koppal | 16.18 | 16.20 |
| 21.32 | 21.34 | Gadag | 15.30 | 15.32 |
| 22.50 | 23.00 | Hubbali | 14.20 | 14.30 |
| 23.23 | 23.25 | Dharwad | 13.38 | 13.40 |
| 00.50 | 00.52 | Londa | 12.10 | 12.12 |
| 01.30 | 01.40 | Castle Rock | 11.30 | 11.35 |
| 03.20 | 03.25 | Kulem | 10.15 | 10.20 |
| 03.44 | 03.45 | Sanvordem | 09.49 | 09.50 |
| 04.15 | 04.20 | Madgaon | 09.30 | 09.35 |
| 05.45 | -- | Vasco-Da-Gama | -- | 09.00 |

This train consists of First AC, 2AC, 3AC, Sleeper and General Second Class Coaches

***Booking for these trains will be opened tomorrow (04.10.2024) at 08.00 hrs**